Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in principal@klsvdit.edu.in**

Date: 26-08-2022

**ಪತ್ರಿಕಾ ಪ್ರಕಟಣೆ:**

## ಟೊಯೋಟಾ ಕಿರ್ಲೋಸ್ಕರ್ ನ ಶ್ರೇಷ್ಠತೆಯ ಕೇಂದ್ರಕ್ಕೆ ವಿದ್ಯಾರ್ಥಿಗಳು ಭೇಟಿ

ಕೆ.ಎಲ್.ಎಸ್. ವಿ.ಡಿ.ಐ.ಟಿ. ಹಳಿಯಾಳದಲ್ಲಿರುವ ಟೊಯೋಟಾ ಕಿರ್ಲೋಸ್ಕರ್ ಸೆಂಟರ್ ಆಫ್ ಎಕ್ಸಲೆನ್ಸ್ ಗೆ ಸ್ಥಳೀಯ ಡಿ.ಐ.ವಿ.ಟಿ. ಕಾಲೇಜಿನ ಹಾಗೂ ವಿ. ವಿ. ಡಿ. ಶಾಲೆಯ ವಿದ್ಯಾರ್ಥಿಗಳು ಆಗಸ್ಟ್ 26 ರಂದು ಭೇಟಿ ನೀಡಿ ನೂತನ ತಂತ್ರಜ್ಞಾನದ ಮಾಹಿತಿ ಪಡೆದರು. ವಿದ್ಯಾರ್ಥಿಗಳ ತಾಂತ್ರಿಕ ಜ್ಞಾನ ಅಭಿವೃದ್ಧಿಯ ಸಲುವಾಗಿ ಟೊಯೋಟಾ ಕಿರ್ಲೋಸ್ಕರ್ ಸಂಸ್ಥೆಯು ಮಹಾವಿದ್ಯಾಲಯದ ಆವರಣದಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ ಸ್ಥಾಪಿಸಿದ್ದು, ಇನ್ನೊವಾ ಹಾಗೂ ಇಟಿಯೋಸ್ ವಾಹನದ ಟ್ರಾನ್ಸ್ ಮಿಷನ್ ಯೂನಿಟ್ ಅನ್ನು ಇದು ಒಳಗೊಂಡಿದೆ. ಐ.ಟಿ.ಐ. ಕಾಲೇಜಿನ 60 ವಿದ್ಯಾರ್ಥಿಗಳು ಹಾಗೂ ವಿ.ವಿ.ಡಿ. ಶಾಲೆಯ 50ಕ್ಕೂ ಅಧಿಕ ವಿದ್ಯಾರ್ಥಿಗಳು ಯಂತ್ರದ ಬಿಡಿ ಭಾಗವನ್ನು ವೀಕ್ಷಿಸಿ ಮಾಹಿತಿ ಪಡೆದುಕೊಂಡರು. ಮಹಾವಿದ್ಯಾಲಯವು ಟೊಯೋಟಾ ಕಿರ್ಲೋಸ್ಕರ್ ಸಂಸ್ಥೆಯೊಂದಿಗೆ ಒಡಂಬಡಿಕೆ ಹೊಂದಿದ್ದು, ಸ್ಥಳೀಯ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳು ಭೇಟಿ ನೀಡಿ ವಾಹನ ಯಂತ್ರದ ಕಾರ್ಯನಿರ್ವಹಣೆಯ ಮಾಹಿತಿ ಹೊಂದುವಂತೆ ಪ್ರಾಚಾರ್ಯರಾದ ಡಾ. ವಿ. ಎ. ಕುಲಕರ್ಣಿ ಅವರು ನುಡಿದರು. ಸೆಂಟರ್ ಆಫ್ ಎಕ್ಸಲೆನ್ಸ್ ವೀಕ್ಷಣೆಗೆ ಮುಕ್ತವಾಗಿದ್ದು, ಯಾವುದೇ ಪ್ರವೇಶ ಶುಲ್ಕವಿಲ್ಲದೆ ಸ್ಥಳೀಯ ವಿದ್ಯಾರ್ಥಿಗಳು ಉಚಿತವಾಗಿ ಭೇಟಿ ನೀಡಬಹುದೆಂದು ಹೇಳಿದರು. ಸ್ಥಳೀಯ ವಿದ್ಯಾಸಂಸ್ಥೆಗಳು ಮುಂಚಿತವಾಗಿ ಪರವಾನಿಗೆಯನ್ನು ಪಡೆದು ಭೇಟಿ ನೀಡಬೇಕು ಮತ್ತು ಪರವಾನಿಗೆ ಪಡೆಯಲು ಡೀನ್ ಎಫ್. ಐ. ಐ. ಐ. ಸಂಚಾಲಕರಾದ ಪ್ರೊ. ಸುಧೀರ್ ಕುಲಕರ್ಣಿ, ಮೊ. ಸಂ. 9481731226 ಸಂಪರ್ಕಿಸಲು ಕೋರಲಾಗಿದೆ.

ಪ್ರಾಂಶುಪಾಲರು

**Principal**
**KLS Vishwanathrao Deshpande**
**Institute of Technology, Haliyal**


ENGINEERING
COMPUTER SCIENCE ENGINEERING
VISHWANATHRAO DESHPANDE
INSTITUTE OF TECHNOLOGY, HALIYAL
CIVIL ENGINEERING
VISHWANATHRAO DESHPANDE
INSTITUTE OF TECHNOLOGY, HALIYAL

